ಓ.ಎಸ್.ನಂ.132/2022

ಪಿ ಡಬ್ಲ್ಯೂ: 1

ದಿನಾಂಕ 25.06.2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ಬಿ ಎ ಪದವಿಧರಳಾಗಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ಮಾಹಿತಿ ಇರುತ್ತದೆ. ನನ್ನ ವಿವಾಹವು 2020 ನೇ ಸಾಲಿನಲ್ಲಿ ಅಗಸನಹಳ್ಳಿ ಗ್ರಾಮದ ಕಲ್ಯಾಣ ಮಂಟಪದಲ್ಲಿ ಆಗಿರುತ್ತದೆ. ನನ್ನ ಗಂಡನ ತಂದೆಯ ಹೆಸರು ಹುಚ್ಚಪ್ಪ ಮತ್ತು ತಾಯಿ ರಿಂದವ್ವ ಆಗಿರುತ್ತದೆ. ನನ್ನ ಗಂಡನ ಸಹೋದರರ ಹೆಸರು ಬೀರಪ್ಪ ಮತ್ತು ಮಂಜಪ್ಪ ಆಗಿರುತ್ತದೆ. ನನ್ನ ಗಂಡನಿಗೆ ಸಹೋದರಿಯರು ಇರುವುದಿಲ್ಲ. ನನ್ನ ಗಂಡನ ಸ್ವಂತ ಊರು ಹಲಗೇರಿ ಆಗಿರುತ್ತದೆ.

**2.** ನನ್ನ ಗಂಡ ಬ್ಯಾಡಗಿ ತಾಲೂಕಿನ ಅಗಸನಹಳ್ಳಿಯಲ್ಲಿ ವಾಸ ಇರುತ್ತಾನೆ ಎಂದರೆ ಸರಿ. ಆತನಿಗೆ ಸದರಿ ಊರಿನಲ್ಲಿ ಸ್ವಂತ ವಾಸದ ಮನೆ ಇದೆ ಎಂದರೆ ಸರಿಯಲ್ಲ. ಅ ರೀತಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನ್ನ ಗಂಡ ಎಲ್ಲಿ ವಾಸ ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಅಗಸನಹಳ್ಳಿ ವಾಸದ ಮನೆ ಈಗ ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಪಂಚಾಯತಿ ಆಸ್ತಿಗಳ ದೃಡೀಕರಣ ಪತ್ರಗಳನ್ನು ತೋರಿಸಿ ಸಾಕ್ಷಿಯ ಗಂಡನ ಮನೆಯವರ ಹೆಸರಿನಲ್ಲಿ ಇರುವ ಬಗ್ಗೆ ಕೇಳಿದ್ದು ಸದರಿ ದಾಖಲೆಗಳು ಸಾಕ್ಷಿಯ ಮಾಹಿತಿಯ ಮೇರೆಗೆ ನೀಡದ ಕಾರಣ ಹಾಗೂ ಸಾರ್ವಜನಿಕ ದಾಖಲೆಗಳು ಆಗಿರುವ ಕಾರಣ ಪ್ರತಿವಾದಿಗೆ ತನ್ನ ಸಾಕ್ಷ್ಯದಲ್ಲಿ ಹಾಜರು ಪಡಿಸುವಂತೆ ಸೂಚಿಸಿ ಗುರುತಿಸುವಿಕೆಯಿಂದ ವಿನಾಯಿತಿಸಲಾಯಿತು.

**3.** ದಾವಾ ಆಸ್ತಿಯು ಈಗ 2 ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ. 2 ನೇ ಪ್ರತಿವಾದಿಯು ಹಲಗೇರಿ ಗ್ರಾಮದ ವಾಸಿಯಾಗಿರುತ್ತಾರೆ. ಆತನನ್ನು ನಾನು ಯಾವತ್ತು ಭೇಟಿ ಮಾಡಿರುವುದಿಲ್ಲ. ನಿಪಿ 3 ರ ಖರೀದಿ ಪತ್ರವನ್ನು ನಾನು ಮಾರಾಟವಾದ ಸ್ವಲ್ಪ ದಿನಗಳ ನಂತರ ನೋಡಿರುತ್ತೇನೆ. ಸದರಿ ಖರೀದಿ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಯ ಚೆಕ್ ಬಂದಿ  ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ಪಶ್ಚಿಮಕ್ಕೆ 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ಸರ್ವೆ ನಂ 301/6 ರ ಉಳಿದ ಆಸ್ತಿ, ಪೂರ್ವಕ್ಕೆ ರಸ್ತೆ, ಉತ್ತರಕ್ಕೆ ರಸ್ತೆ ಮತ್ತು ದಕ್ಷಿಣಕ್ಕೆ ರಸ್ತೆ ಇರುತ್ತದೆ.

**4.** ದಾವಾ ಆಸ್ತಿಯ ಪಶ್ಚಿಮಕ್ಕೆ 1 ನೇ ಪ್ರತಿವಾದಿಯ ತಮ್ಮನ ಹುಚ್ಚಪ್ಪನ ಆಸ್ತಿ ಇದೆ ಎಂದರೆ ಸರಿಯಲ್ಲ. ಅವರುಗಳ ನಡುವೆ ಈಗಾಗಲೇ ಪಾಲು ವಾಟ್ನಿ ಯಾಗಿರುವ ಕಾರಣ

ಅವರನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಆ ಕುರಿತು ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ. 1 ನೇ ಪ್ರತಿವಾದಿ, ತಂದೆ ತಾಯಿ ಮತ್ತು ಸಹೋದರರು ಇಂದಿಗೂ ಸಹ ಜಂಟಿ ಕುಟುಂಬದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ.

**5.** ದಾವಾ ಆಸ್ತಿಯ ಮೂಲ ವಿಸ್ತೀರ್ಣ ಮತ್ತು ಯಾರ ಹೆಸರಿನಲ್ಲಿ ಇವೆ ಎಂದು ನನಗೆ ಗೊತ್ತಿಲ್ಲ. ಸದರಿ ಉಳಿದ ಆಸ್ತಿಗಳು ನನ್ನ ಗಂಡನ ಕುಟುಂಬದವರ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ದಾವಾ ಆಸ್ತಿಯನ್ನು ಎಷ್ಟು ಹಣಕ್ಕೆ ಖರೀದಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 3 ರಂತೆ 1,55,000/-ಕ್ಕೆ ಖರೀದಿಸಿರುತ್ತಾರೆ ಎಂದರೆ ಸರಿ. ಖರೀದಿ ಕಾಲದಿಂದಲೂ 2 ನೇ ಪ್ರತಿವಾದಿ ದಾವಾ ಆಸ್ತಿ ವಹಿವಾಟು ಮಾಡಿಕೊಂಡಿರುತ್ತಾರೆ ಎಂದರೆ ಸರಿ.

**6.** ನಾನು ಅಂಗನವಾಡಿ ಶಿಕ್ಷಕಿಯಾಗಿ 1 ವರ್ಷದಿಂದ ಕಾರ್ಯನಿರ್ವಹಿಸುತ್ತಿದ್ದೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ಅಭ್ಯಂತರ ಇರುವುದಿಲ್ಲ. 1 ನೇ ಪ್ರತಿವಾದಿ ವಿವಾಹದ ನಂತರ ಯಾವ ಕೆಲಸ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಪ್ರತಿವಾದಿಯ ಆದಾಯದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಹೊರತು ಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇವೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ 1 ನೇ ಪ್ರತಿವಾದಿಯೊಂದಿಗೆ ಮಿಲಾಪಿಯಾಗಿ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಮ್ಮ ಮನೆತನದ ಅಡಚಣೆಗಾಗಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನ್ಯಾಯಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

Sd/-

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.